US Agriseeds®
Seed that Works

SeedWorks®

25 YEARS OF SERVING FARMERS

# US 7711

- ಕಟಾವಿಗೆ ಬರುವ ಅವಧಿ: 80-85 ದಿನಗಳು
- ಹೆಚ್ಚಿನ ಧಾನ್ಯ ಮತ್ತು ಮೇವಿನ ಇಳುವರಿ
- ದಪ್ಪ ಕಾಳಿನ ಉದ್ದವಾದ ಮತ್ತು ದಟ್ಟವಾದ ತೆನೆಗಳು
- ಉತ್ತಮ ನಿಲ್ಲುವ ಸಾಮರ್ಥ್ಯ ಮತ್ತು ಸ್ವಚ್ಛ ಹಸಿರು ಮೇವು
- ಮುಂಗಾರು ಮತ್ತು ಹಿಂಗಾರಿನಲ್ಲಿ ಬೆಳೆಯಲು ಸೂಕ್ತವಾಗಿದೆ




# US 7773

- ನಾಟಿ ಮಾಡಿದ 75-78 ದಿನಗಳ ನಂತರ ಫಸಲಿಗೆ ಬರುತ್ತದೆ
- ದಟ್ಟವಾದ, ದೃಢವಾದ, ಒಂದೇ ಸಮನಾದ ತೆನೆಗಳು.
- ಹೆಚ್ಚು ಕಾಳುಗಳು, ಮೇವು ಯಾವಾಗಲೂ ಹಸಿರಾಗಿರುತ್ತದೆ.
- ಬೀಳುವುದನ್ನು ತಡೆದುಕೊಳ್ಳುವ ಶಕ್ತಿ ಹೊಂದಿದೆ.
- ಮುಂಗಾರು ಮತ್ತು ಹಿಂಗಾರಿನಲ್ಲಿ ಬೆಳೆಯಲು ಸೂಕ್ತವಾಗಿದೆ



# ಸಜ್ಜೆ ಬೇಸಾಯ ಕ್ರಮಗಳು:

## ಕ್ಷೇತ್ರ ತಯಾರಿ:

ಪ್ರಾರಂಭದಲ್ಲಿ ಭೂಮಿಯನ್ನು ಮಣ್ಣು ತಿರುಗಿಸುವ ನೇಗಿಲಿನಿಂದ ಉಳುಮೆ ಮಾಡಬೇಕು, ಮತ್ತು ಉತ್ತಮವಾದ ಆಳವಾದ ಹದವನ್ನು ಪಡೆಯುವವರೆಗೆ ಪುನರಾವರ್ತಿತ ಉಳುಮೆ ಅಥವಾ ಕುಂಟೆ ಹೊಡೆಯುವುದನ್ನು ಮುಂದುವರಿಸಬೇಕು

## ಬಿತ್ತನೆ :

| | |
|---|---|
| **ಬಿತ್ತುವ ಸಮಯ (ಖರೀಫ್):** | ಜೂನ್-ಜುಲೈ |
| **ಬಿತ್ತುವ ಸಮಯ (ಬೇಸಿಗೆ):** | ನವೆಂಬರ್ 20- ಜನವರಿ |
| **ಬಿತ್ತನೆ ಬೀಜ ಪ್ರಮಾಣ** | 1.5 ಕಿಲೊಗ್ರಾಮ್/ ಎಕರೆ |
| **ಅಂತರ** | 45 ಸೆಂ.ಮೀ. x 15 ಸೆಂ.ಮೀ. |
| **ಆಳ** | 2-3 ಸೆಂ.ಮೀ. |

## ಪೋಷಕಾಂಶ ನಿರ್ವಹಣೆ:

ರಾಸಾಯನಿಕ ಗೊಬ್ಬರ ಬಳಕೆ ಮಣ್ಣಿನ ಪರೀಕ್ಷಾ ವರದಿ ಮತ್ತು ಸ್ಥಳೀಯ ಕೃಷಿ ವಿಶ್ವವಿದ್ಯಾಲಯದ ಶಿಫಾರಸುಗಳ ಆಧಾರದ ಮೇಲೆ ಮಾಡಬೇಕು. ಸಾಮಾನ್ಯ ಶಿಫಾರಸಾದ ಗೊಬ್ಬರ ಪ್ರಮಾಣವನ್ನು ಕೆಳಗಿನ ಟೇಬಲ್ನಲ್ಲಿ ನೀಡಲಾಗಿದೆ:

- **ಹಸುವಿನ ಗೊಬ್ಬರ:** 10 ಮೆಟ್ರಿಕ್ ಟನ್/ ಎಕರೆ

| ಗೊಬ್ಬರ | ಬೇಸಲ್ (ಕೆಜಿ/ಎಕರೆ) | ಮೊದಲ ನೀರಿನ ಸಮಯ (ಕೆಜಿ/ಎಕರೆ) | ಒಟ್ಟು (ಕೆಜಿ/ಎಕರೆ): |
|---|---|---|---|
| ಯೂರಿಯಾ | 18 | 52 | 70 |
| ಡಿಎಪಿ | 35 | | 35 |
| ಎಮ್ಒಪಿ | 20 | | 20 |

## ನೀರಿನ ನಿರ್ವಹಣೆ:

ನೀರಾವರಿಯ ನಿರ್ಣಾಯಕ ಹಂತಗಳು 25-30 ದಿನಗಳು (ಕವಲುಗಳ ಬೆಳವಣಿಗೆ ಹಂತ) ಮತ್ತು ಧಾನ್ಯ ತುಂಬುವ ಹಂತ ಪ್ರಮುಖವಾಗಿರುತ್ತದೆ.

## ಕಳೆ ನಿರ್ವಹಣೆ:

- ಬಿತ್ತಿದ 15 ದಿನಗಳೊಳಗೆ ಒಂದು ಬಾರಿ ಕೈ ಕಳೆ ತೆಗೆಯಬೇಕು ಮತ್ತು ನಂತರ 10-15 ದಿನಗಳ ಅಂತರದಲ್ಲಿ ಒಂದು ಬಾರಿ ಅಂತರ ಬೇಸಾಯ ಮಾಡಬೇಕು. ಕಳೆಗಳ ಪೈಪೋಟಿ ಇಳುವರಿಯನ್ನು 25-50% ವರೆಗೆ ಕಡಿಮೆ ಮಾಡಬಹುದು.
- ಅಟ್ರಜೈನ್ ಕಳೆನಾಶಕವನ್ನು ಪ್ರತಿ ಹೆಕ್ಟೇರ್ಗೆ 500 ಗ್ರಾಂನಂತೆ ಬಳಸಬಹುದು. .

## ಕೀಟ & ರೋಗ ನಿರ್ವಹಣೆ:

| ವಿಶೇಷತೆ | ನಿರ್ವಹಣೆ |
|---|---|
| ಬ್ಲಾಸ್ಟ್ | ಬ್ಲಾಸ್ಟ್5% ಗಿಡಗಳು ರೋಗಗ್ರಸ್ತವಾಗುವಾಗವಾಗ ಪ್ರೊಪಿಕೊನಾಜೋಲ್ @ 1 ಮಿ.ಲೀ./ಲೀ. ನೀರಿನಿಂದ ಸ್ಪ್ರೇ ಮಾಡಿ |
| ಡೌನಿ ಮಿಲ್ಡ್ಯೂ | ರೋಗಿತ ಗಿಡಗಳನ್ನು ತೆಗೆಯಿರಿ; ಮೆಟಾಲಾಕ್ಸಿಲ್ 4% + ಮ್ಯಾಂಕೋಜೆಬ್ 64% @ 2 ಗ್ರಾಂ/ಲೀ. ಆರಂಭಿಕ ಲಕ್ಷಣಗಳ ಸಮಯದಲ್ಲಿ ಸ್ಪ್ರೇ ಮಾಡಿ |
| ವೈಟ್ ಗ್ರಬ್ | ಥೈಮೆಥೊಕ್ಸಾಮ್ 0.9% + ಫಿಪ್ರೊನಿಲ್ 0.2% ಜಿಆರ್ @ 5 ಕೆಜಿ/ಎಕರೆ |
| ಶೂಟ್ಫ್ಲೈ | ಬಿತ್ತನೆ 10-15 ದಿನಗಳ ನಂತರ ಪ್ರೊಫೆನೊಫೋಸ್ @ 20 ಮಿ.ಲೀ./15 ಲೀ. ನೀರಿನಿಂದ ಸ್ಪ್ರೇ ಮಾಡಿ |
| ತೆನೆ ಹುಳು | ಕೊರಜೆನ್ @ 6 ಗ್ರಾಂ/15 ಲೀ. ನೀರಿನಿಂದ ಸ್ಪ್ರೇ ಮಾಡಿ |
| ಸ್ಟೆಂಬೋರರ್ | ಕೊರಜೆನ್ @ 6 ಗ್ರಾಂ/15 ಲೀ. ನೀರಿನಿಂದ ಅಥವಾ ಸೈಪರ್ಮೆತ್ರಿನ್ + ಕ್ಲೋರೋಪೈರಿಫಾಸ್ @ 25 ಮಿ.ಲೀ./15 ಲೀ. ನೀರಿನಿಂದ ಸ್ಪ್ರೇ ಮಾಡಿ |
| ಹುಲ್ಲು ಚಿಟ್ಟೆ | ಸೈಪರ್ಮೆತ್ರಿನ್ + ಕ್ಲೋರೋಪೈರಿಫಾಸ್ @ 25 ಮಿ.ಲೀ./15 ಲೀ. ನೀರಿನಿಂದ ಸ್ಪ್ರೇ ಮಾಡಿ |

## ಕಟಾವು ಮತ್ತು ಒಕ್ಕಣೆ :

ಸಜ್ಜೆ ಬೆಳೆಯನ್ನು ಕೊಯ್ಲು ಮಾಡಲು ಸೂಕ್ತ ಸಮಯವೆಂದರೆ, ಕಾಳುಗಳ ಹಿಲಾರ್ ಭಾಗದಲ್ಲಿ ಕಪ್ಪು ಚುಕ್ಕೆ ಕಾಣಿಸಿಕೊಂಡು ಸಸ್ಯಗಳು ಪಕ್ವವಾದಾಗ. ಬೆಳೆ ಬಲಿಯಲು ಪ್ರಾರಂಭಿಸಿದಾಗ ಎಲೆಗಳು ಹಳದಿಯಾಗುತ್ತವೆ ಮತ್ತು ಒಣಗಿದಂತೆ ಕಾಣುತ್ತವೆ. ಕಾಳುಗಳು ಗಟ್ಟಿಯಾಗಿರುತ್ತವೆ. ಕಾಳುಗಳಲ್ಲಿನ ತೇವಾಂಶ 13% ಅಥವಾ ಅದಕ್ಕಿಂತ ಕಡಿಮೆ ಇದ್ದರೆ ಅವುಗಳನ್ನು ಒಣಗಿದವು ಎಂದು ಪರಿಗಣಿಸಲಾಗುತ್ತದೆ. ದೀರ್ಘಕಾಲೀನ ಶೇಖರಣೆಗಾಗಿ (ಆರು ತಿಂಗಳಿಗಿಂತ ಹೆಚ್ಚು), ತೇವಾಂಶದ ಪ್ರಮಾಣವು 12%ಕ್ಕಿಂತ ಕಡಿಮೆ ಇರಬೇಕು